ಕೆಲುವರಿಗೆ ಹೊಟ್ಟೆ ಉರಿಯುತ್ತಿತ್ತು. ಊರ ಪಕ್ಕದ ಸಿಟಿ ಸಂಘಟನೆಯಲ್ಲಿ ಆಗಾಗ ಆ ಧ್ವಜದೊಂದಿಗೆ ಕಾಣುವ ದುರಗನನ್ನು ಕಂಡರೆ ಅವರ ಕಣ್ಣು ಕೆಂಪಾಗುತ್ತಿತ್ತು.

ಸಂಗಮ್ಮಳು ಆ ವಿಷಯ ಕಿವಿಗಿಟ್ಟ ದಿನುದಿಂದ ಆ ಬಗ್ಗೆಯೇ ಯೋಜಿಸುತ್ತಿದ್ದ ದುರುಗನಿಗೆ ಊರು ದುಗ್ಗಮ್ಮನ ಕಟ್ಟೆಯಡಿ ಅವಳ ಹಿರೇಮಗ ಭೀಮಪ್ಪ ಆ ದಿನ ಎದುರಾಗಿ 'ಲೇ ದುರಗಪ್ಪ... ನಮ್ಮರ‍್ಗೆ ಮೊನ್ನೆ ಕಂಪ್ನಿದೋರು ಬಂದಾರಲ್ಲಾ ಅವ್ರ ಮುದ್ಕಿ ಹೆಸರಿಗಿದ್ದ ಹೊಲಾ ತಗೊಂಡ್ರಪಾ... ಎಕ್ರೇಕ 30 ಸಾವ್ರದಂಗ... ಊರು ಹಿರೇರ ಮುಗುಸಿದ್ರು... ಭೂಮಿ ಇವತ್ತಿದ್ದೀತು, ನಾಳೆ ಹೋದಿತು... ಚೋಲೊ ದುಡ್ಡಾತು ಕೊಟ್ನೆಪಾ... ಮುದ್ಕಿನೂ ಸೈ ಮಾಡುಲ್ಲಂದಿತ್ತು... ಇದು ಹೊಲದ ಪತ್ರಲ್ಲ... ರೇಷನ್ ಕಾರ್ಡಿನ ಪತ್ರ ಸೈ ಮಾಡು ಅಂದೆ. ಆಗ ಮಾಡ್ತು...' ಎಂದು ಆತನು ಒಂದೇ ಉಸುರಿನಲ್ಲಿ ಮಾತು ಮುಗಿಸಿ, ವರುಟಾದ ಆ ಬಿಳಿ ಹಾಳೆ ಮುಂದಿಟ್ಟಾಗ ದುರಗನು ತಳುಮಳುಗೊಂಡಿದ್ದನು.

'ನಿನ್ನ ಹೊಲಾ ಏನು ಆಗುಲ್ಲೆಮ್ಮಾ... ಆ ಹೊಲಾ ಉಳಸಾ ಜವಾಬ್ದಾರಿ ನಂಗ್ಬಿಡು' ಎಂದು ಕೆಲ ದಿನಗಳ ಹಿಂದಷ್ಟೇ ದುರುಗನು ಸಂಗಮ್ಮಗೆ ಮಾತು ಕೊಟ್ಟು ಕೈ ಮುಟ್ಟಿದ್ದನು. ಆದರೆ, ಪರಿಸ್ಥಿತಿ ಕೈ ಮೀರಿ ಸಂಗಮ್ಮಳ ಆಸ್ತಿ ಮಾರಾಟದ ಪತ್ರ ಕಂಡು ತಳುಮಳುಗೊಂಡಿದ್ದ ದುರಗನು ಮನೆಗೆ ಬರುತ್ತಲೇ 'ಅಯ್ಯ ಸಂಗಮ್ಮನ ಹೊಲಾನ ಆಕಿ ಮಕ್ಳು ಯಾರ ಕಂಪ್ನಿದವ್ರಗೆ ಮಾರಿದ್ರಂತಲ್ಲಾ ಎಪ್ಪಾ... ನಮ್ಮೂರಿಗೆ ಅವ್ರೊಳೇ ಜೋಡು ಆದ್ವು ಕಂಪನೀವು ಅಂತೀನಿ... ಅವು ಮನಿ ಹಾಳಾಗ... ವಕೀಲಾಗಿ ಇಡೀ ದೇಶದ ಸುದ್ದೀನ ಮಾತಾಡ್ತೀ ನೀನು... ಸಂಗಮ್ಮನ ಹೊಲಾ ಉಳಿವಂಗ ಮಾಡ್ಲಿಲ್ಲ ಬಿಡಾ ಎಪ್ಪಾ ನೀನು...' ಎಂದು ತನ್ನವ್ವಳು ಹೇಳಿದ ಮಾತುಗಳನ್ನು ಕೇಳಿ ಅವುನ ಎದುಗೆ ಚುಚುಗ ಚುಚ್ಚಿದಂತುನಿಸಿ ತಡ ಮಾಡುದೇ ಗುಡಿಸಲತ್ತ ರಭಸದಿಂದಲೇ ಹೋದನು ದುರಗ.

ಹೊಲ ಮಾರುವ ಸುದ್ದಿಯು ಊರಲ್ಲಿ ಹರುಡಿ, ಮನನೊಂದು ಭಯಗೊಂಡಿದ್ದಳೇನೋ ಘಳಿಗೆ, ಘಳಿಗೆಗೂ ದುರುಗನು ಬರುವುದನ್ನು ಕಾದು ಕೂತಿದ್ದ ಸಂಗಮ್ಮಳು ಅವುನ ಹೆಜ್ಜೆ ಸಪ್ಪುಳ ಕೇಳಿ, 'ಎಪ್ಪಾ ದುರಗಣ್ಣ ನಿಮ್ಮಾಂವ ಭೀಮಪ್ಪ ಗುಡಸಲುಕ ಬಂದ ರೇಶನ್ ಕಾಡಿಂದಿದು ಅಂತ ಹೇಳಿ ಬಿಳೆ ಹಾಳಿ ಮ್ಯಾಲೆ ನನ್ನ ಹೆಬ್ಬಟ್ಟು ಒತ್ತಿಸಿಕೊಂಡ ಹೋಗಿದ್ನಪ್ಪೊ... ನಂಗ್ಯಾಕ ಹೊಟ್ಟಿ ಬುಗುಲ್ ಬುಗುಲ್ ಅನ್ನಕತ್ತೈತಿ... ನಮ್ಮ ಊರ ಗುಡ್ಡಕ್ಕ ಯಾರ ಕಂಪ್ನಿದೋರು ಬಂದಾರಂತ... ಅವೇನ ಹೊಲ ಕೇಳಕತ್ಯಾವಂತ ನಂಗ ಬಾಳವ್ವ ಹೇಳ್ತು... ನಂಗ್ಯಾಕ ನಿಧಾನ ಆಗುವಲ್ದಪಾ... ದವ್ಡು ನನ್ನ ಹೊಲನಾ ಆಕಿ ಮಕ್ಳ ಹೆಸ್ರಿಲೆ ಮಾಡ್ಸ ಎಪ್ಪಾ...' ಎಂದು ಸಂಗಮ್ಮ ನೊಂದು ಅನ್ನುತ್ತಲೇ ದುರಗನಿಗೇ ತಾನು ಅವಳಿಗೆ ಏನು ಹೇಳಬೇಕೋ ಎಂದು ತೋಚದೇ ಬಾವಿಕಟ್ಟೆಗೆ ಒರಗಿದನು.

* * *

ಜೀವತತ್ವ ಸಂಗಮ್ಮ, ಹೆಣ್ಣುಜೀವಕ್ಕು ಸಿಗಬೇಕು ಆಸ್ತಿ ಅನ್ನುವ ಅವುಳ ವಿಚಾರ, ಲಾಭಕೋರುತನದ ಆ ಖಾಸಗೀ ಕಂಪುನಿ, ಮಾನವೀಯತೆ ಮರೆತ ಆ ಅವರು, ತನ್ನ ನ್ಯಾಯಪರ ವಿಚಾರಕ್ಕೆ ಬೆಲೆ ಕೊಡದ ವ್ಯವಸ್ಥೆ... ಅದು ಇದು ಎಲ್ಲವೂ ಬಿಡುದಂತೆ ಕಾಡಿ ಬಟ್ಟೆಬರೆಯೊಂದಿಗೆ ದುರಗನು ಮರಳಿ ಪಟ್ಟಣದ ಹಾದಿ ಹಿಡಿಯಲು ನಿರ್ಧರಿಸಿ ಅತ್ತ ಹೊರುಟನು. ಅಲ್ಲಿ, ಪಟ್ಟುಣದಲ್ಲಿ 'ಪ್ರಾಣ ಕೊಡ್ತೀವಿ... ಭೂಮಿ ಕೊಡುಂಗಿಲ್ಲ...' ಎಂದು ಘೋಷಣೆ ಹಾಕುತ್ತಲೇ ಇದ್ದ ಆ ಗುಂಪನ್ನು ಕಂಡನು. 'ನಮ್ಮನ್ನು ಸಾಕುವ, ಜ್ವಾಪಾನ ಮಾಡುವ ಭೂಮಿ ಬಿಡುಲಾರೆವು... ಖಾಸಗೀ ಕಂಪನಿಗಳಿಗೆ ಮಣ್ಣು ನೀಡುವುದಿಲ್ಲ.' ಎನ್ನುವ ಅವರ ಮಾತುಗಳನ್ನು ಕೇಳಿಸಿಕೊಂಡು ದುರುಗನು ತುಸು ನಿರಾಳಾದನು.

ಕೆಲ ಹೊತ್ತಿನ ತರುವಾಯ ಅವರು 'ನಿಮಗೆ ಹಣ ಕೊಡ್ತಿವಿ ನಮುಗು ಭೂಮಿ ಕೊಡ್ರಿ... ಫ್ಯಾನು ಹಾಕ್ತೀವಿ...' ಎಂದನ್ನುತ್ತ ಮಾತಿಗಿಳಿದಿದ್ದನ್ನು ದುರಗನು ನೋಡಿದನು. ಭೂಮಿ ಉಳುವಿಗಾಗಿ ನಡೆದಿದ್ದ ಹೋರಾಟವು, ರಸ್ತೆ ತಡೆಯು ಉಪುವಾಸ ಸತ್ಯಾಗ್ರಹಕ್ಕೆ ಮಾರ್ಪಾಡಾಗಿ ಅದು ಯಶಸ್ವಿಯಾಯಿತು ಅನ್ನುತ್ತಲೇ ಮರುದಿನಕ್ಕೆ ಮುಗಿದು ಹೋಗಿ ಕೆಲವು ಹೋರಾಟಗಾರರು ನೋಟು ಎಣಿಸುತ್ತಿದ್ದಾರೆಂಬ ಸುದ್ದಿಯು ಸಹ ದುರುಗನ ಕಿವಿಗೆ ಬಿದ್ದಿತ್ತು.

* * *

ಮತ್ತೇನೋ ವಿಚಾರಿಸಿ ದುರಗನು ಮರಳಿ ತನ್ನೂರತ್ತ ಬರುತ್ತಲೇ ಊರ ಓಣಿಗಳು ಕತ್ತಲು ಪದುವಾಡತೊಡುಗಿದ್ದವು. ಮೂಡುಣ ಕೆಂಪೇರುತ್ತಲೇ